**ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ (ಬಾಕಿಗಳ ವಸೂಲಾತಿ) ಅಧಿನಿಯಮ, 1976**
**ಪ್ರಕರಣಗಳ ಅನುಕ್ರಮಣಿಕೆ**

**ಉದ್ದೇಶಗಳು ಮತ್ತು ಕಾರಣಗಳ ಹೇಳಿಕೆ;**
**ಪ್ರಕರಣಗಳು:**


1. ಸಂಕ್ಷಿಪ್ತ ಹೆಸರು, ವ್ಯಾಪ್ತಿ ಮತ್ತು ಪ್ರಾರಂಭ
2. ಪರಿಭಾಷೆಗಳು.
3. ಬಿಲ್ಲುಗಳಲ್ಲಿ ಪಾವತಿಗಳನ್ನು ಮಾಡುವ ದಿನಾಂಕ ಮತ್ತು ಪಾವತಿ ಮಾಡದಿರುವುದರ ತತ್ಪರಿಣಾಮಗಳನ್ನು ತಿಳಿಸುವುದು.
4. ಬಾಕಿಗಳ ಮತ್ತು ಪಾವತಿಸದಿರುವುದಕ್ಕಾಗಿನ ದಂಡದ ತಗಾದೆ ನೋಟೀಸು.
5. ಪಾವತಿಯ ಹೊಣೆಗಾರಿಕೆಯನ್ನು ಪ್ರಶ್ನಿಸವುದಕ್ಕಾಗಿ ದಾವೆ.
6. ಪಾವತಿಸದಿದ್ದಲ್ಲಿ ಬಾಕಿ, ಮುಂತಾದವುಗಳ ವಸೂಲಾತಿ.
7. ನಿಯಮಗಳ ರಚನಾಧಿಕಾರ.


*****

**ಉದ್ದೇಶಗಳು ಮತ್ತು ಕಾರಣಗಳ ಹೇಳಿಕೆಗಳು**

**I**

**1976ರ ಅಧಿನಿಯಮ 51**.- ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಯ ಬಾಕಿಗಳ ವಸೂಲಾತಿಗೆ ಸಂಬಂಧಿಸಿದಂತೆ ಅಸ್ತಿತ್ವದಲ್ಲಿರುವ ಕಾನೂನಿನ ಅಡಿಯಲ್ಲಿ, ಅಂಥ ಬಾಕಿಗಳು ಸಂಚಯವಾದ ದಿನಾಂಕದಿಂದ 3 ವರ್ಷಗಳ ಒಳಗಾಗಿ ಮಂಡಳಿಯು ಸಿವಿಲ್ ದಾವೆಗಳನ್ನು ದಾಖಲಿಸಬೇಕಾಗಿತ್ತು. ಈ ಪ್ರಕ್ರಿಯೆಯು ವಿಳಂಬಕ್ಕೆ ಮತ್ತು ವ್ಯಾಜ್ಯದ ಬಹುದೊಡ್ಡ ಮೊತ್ತ ಒಳಗೊಳ್ಳಲು ಕಾರಣವಾಗುತ್ತದೆ. ಪ್ರಸ್ತುತ 3 ವರ್ಷಗಳಿಗಿಂತ ಹೆಚ್ಚಿನ ಬಾಕಿಗಳ ವಸೂಲಾತಿಗಾಗಿ ಯಾವುದೇ ಉಪಬಂಧಗಳಿರುವುದಿಲ್ಲ. ಸಾರ್ವಜನಿಕ ಲೆಕ್ಕಪತ್ರಗಳ ಸಮಿತಿಯು ತನ್ನ 1966ನೇ ಸಾಲಿನ ವರದಿಯಲ್ಲಿ ಮಂಡಲಿಯ ವ್ಯವಹಾರ ನಡೆಸುವುದಕ್ಕೆ ಸಂಬಂಧಿತ ಕಾನೂನಿನ ಉಪಬಂದಗಳನ್ನು ಪರಿಶೀಲಿಸಬೇಕಾಗಿದೆ ಹಾಗೂ ಮಂಡಳಿಗೆ ಬರಬೇಕಾಗಿರುವ ಬಾಕಿಗಳನ್ನು ಭೂ ಕಂದಾಯದ ಬಾಕಿಯಂತೆ ವಸೂಲಾತಿ ಮಾಡಲು ಕ್ರಮ ಕೈಗೊಳ್ಳುವುದಕ್ಕೆ ಸಲಹೆ ನೀಡಿತ್ತು.

ಆದ್ದರಿಂದ, ವಿದ್ಯುಚ್ಛಕ್ತಿ ಮಂಡಳಿಗೆ ಗ್ರಾಹಕರಿಂದ ಬರಬೇಕಾಗಿರುವ ಬಾಕಿಗಳನ್ನು ಭೂಕಂದಾಯದ ಬಾಕಿಗಳಂತೆ ವಸೂಲಾತಿ ಮಾಡಲು ಅದನ್ನು ಸಶಕ್ತಗೊಳಿಸುವುದಕ್ಕಾಗಿ ಶಾಸನವನ್ನು ರಚಿಸಲು ಪ್ರಸ್ತಾಪಿಸಿದೆ. ಇದರಿಂದ ಅದರ ಆರ್ಥಿಕತೆಯನ್ನು ಸುಧಾರಿಸಲು ಸಹಕಾರಿಯಾಗುತ್ತದೆ.

ಆದ್ದರಿಂದ, ಈ ವಿಧೇಯಕ.

(ಕರ್ನಾಟಕ ರಾಜ್ಯ ಪತ್ರ (ವಿಶೇಷ) ಭಾಗ IV-2ಎ ರಲ್ಲಿ ದಿನಾಂಕ: 14.08.1974 ರಂದು ಸಂ.2592ರಲ್ಲಿ ಪುಟ 6 ರಲ್ಲಿ ಪ್ರಕಟಿಸಲಾಗಿದೆ)

**II**

**2001ರ ಅಧಿನಿಯಮ 27.-** ಕರ್ನಾಟಕ ವಿದ್ಯುಚ್ಛಕ್ತಿ ಸುಧಾರಣಾ ಅಧಿನಿಯಮ, 1999ರ ಅಧಿನಿಯಮಿತಿಯ ಕಾರಣದಿಂದಾಗಿ ಉಂಟಾದ ಅವಶ್ಯಕ ತತ್ಪರಿಣಾಮ ಬದಲಾವಣೆಗಳನ್ನು ತರಲು ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿ (ಬಾಕಿಗಳ ವಸೂಲಾತಿ) ಅಧಿನಿಯಮ, 1976ನ್ನು ಹಾಗೂ ಕರ್ನಾಟಕ ವಿದ್ಯುಚ್ಛಕ್ತಿ (ಬಳಕೆ ಮೇಲೆ ತೆರಿಗೆ ನಿರ್ಧರಣೆ) ಅಧಿನಿಯಮ, 1959ನ್ನು ತಿದ್ದುಪಡಿ ಮಾಡುವುದು ಅವಶ್ಯಕವೆಂದು ಪರಿಗಣಿಸಲಾಗಿದೆ.

ಆದ್ದರಿಂದ ಈ ವಿಧೇಯಕ.

(2001ರ ವಿಧಾನ ಸಭೆಯ ವಿಧೇಯಕ ಸಂ.16ರ ಮೂಲಕ ಕಡತ ಸಂ.ಸಂವ್ಯಶಾಇ 19 ಶಾಸನ 2001)

## 1976ರ ಕರ್ನಾಟಕ ಅಧಿನಿಯಮ 51

(ಕರ್ನಾಟಕ ವಿಶೇಷ ರಾಜ್ಯ ಪತ್ರದಲ್ಲಿ 1976ರ ಜೂನ್ ಇಪ್ಪತ್ತಾರನೇ ದಿನಾಂಕದಂದು ಮೊದಲು ಪ್ರಕಟಿಸಲಾಗಿದೆ).

## ಕರ್ನಾಟಕ [1][ವಿದ್ಯುತ್ ಪ್ರಸರಣ ನಿಗಮ][1] (ಬಾಕಿಗಳ ವಸೂಲಾತಿ) ಅಧಿನಿಯಮ 1976

(1976ರ ಜೂನ್ ಇಪ್ಪತ್ತೂರನೇ ದಿನಾಂಕದಂದು ರಾಜ್ಯಪಾಲರ ಒಪ್ಪಿಗೆಯನ್ನು ಪಡೆಯಲಾಗಿದೆ)

(2001ರ 27ನೇ ಅಧಿನಿಯದ ಮೂಲಕ ತಿದ್ದುಪಡಿಯಾದಂತೆ)

**[1]**[ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ][1]ಕ್ಕೆ ಬಾಕಿಯಿರುವ ಕೆಲವು ಬಾಕಿ ಮೊತ್ತಗಳ ತ್ವರಿತ ವಸೂಲಾತಿಗಾಗಿ ಉಪಬಂಧ ಕಲ್ಪಿಸುವ ಒಂದು ಅಧಿನಿಯಮ.

[1][ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ][1]ಕ್ಕೆ ಬಾಕಿಇರುವ ಕೆಲವು ಬಾಕಿ ಮೊತ್ತಗಳ ತ್ವರಿತ ವಸೂಲಾತಿಗಾಗಿ ಉಪಬಂಧವನ್ನು ಕಲ್ಪಿಸುವುದು ವಿಹಿತವಾಗಿರುವುದರಿಂದ;

ಇದು ಭಾರತ ಗಣರಾಜ್ಯದ ಇಪ್ಪತ್ತೇಳನೆಯ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನ ಮಂಡಲದಿಂದ ಈ ಮುಂದಿನಂತೆ ಅಧಿನಿಯಮತವಾಗಲಿ:-

1. 2001ರ ಅಧಿನಿಯಮ 27ರ ಮೂಲಕ ದಿನಾಂಕ:10.01.2002ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಿದೆ.

**1. ಸಂಕ್ಷಿಪ್ತ ಹೆಸರು, ವ್ಯಾಪ್ತಿ ಮತ್ತು ಪ್ರಾರಭ,-** (1) ಈ ಅಧಿನಿಯಮವನ್ನು [1][ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ][1] (ಬಾಕಿಗಳ ವಸೂಲಾತಿ) ಅಧಿನಿಯಮ, 1976 ಎಂದು ಕರೆಯತಕ್ಕದ್ದು.

1. 2001ರ ಅಧಿನಿಯಮ 27ರ ಮೂಲಕ ದಿನಾಂಕ:10.01.2002ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಿದೆ.

(2) ಇದು ಇಡೀ ಕರ್ನಾಟಕ ರಾಜ್ಯಕ್ಕೆ ವ್ಯಾಪ್ತವಾಗತಕ್ಕದ್ದು.

(3) ಇದು ರಾಜ್ಯ ಸರ್ಕಾರವು ಅಧಿಸೂಚನೆಯ ಮೂಲಕ ಗೊತ್ತುಪಡಿಸಬಹುದಾದ ಅಂಥ [1][ದಿನಾಂಕದಿಂದ][1] ಜಾರಿಗೆ ಬರತಕ್ಕದ್ದು.

1. ಅಧಿಸೂಚನೆ ಸಂ:ಪಿಡಬ್ಲೂಡಿ 158 ಇಇಬಿ 76 ದಿನಾಂಕ:22.06.1979ರ ಮೂಲಕ ದಿನಾಂಕ:22.6.1979 ರಿಂದ ಅಧಿನಿಯಮವು ಜಾರಿಗೆ ಬಂದಿದೆ.

**2. ಪರಿಭಾಷೆಗಳು.-** ಈ ಅಧಿನಿಯಮದಲ್ಲಿ ಸಂದರ್ಭವು ಅನ್ಯಥಾ ಅಗತ್ಯಪಡಿಸಿದ ಹೊರತು,-

(1) [1]["ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ"][1] ಎಂದರೆ ವಿದ್ಯುಚ್ಛಕ್ತಿ (ಸರಬರಾಜು) ಅಧಿನಿಯಮ, 1948ರ (1948ರ ಕೇಂದ್ರ ಅಧಿನಿಯಮ 54) 5ನೇ ಪ್ರಕರಣದ ಅಡಿಯಲ್ಲಿ ರಚಿತವಾದ ಕರ್ನಾಟಕ [1][ವಿದ್ಯುತ್ ಪ್ರಸರಣ ನಿಗಮ][1];

1. 2001ರ ಅಧಿನಿಯಮ 27ರ ಮೂಲಕ ದಿನಾಂಕ:10.01.2002ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಿದೆ.

(2) "ಬಾಕಿಗಳು" ಎಂದರೆ ಈ ಮುಂದಿನ ಕಾರಣದಿಂದಾಗಿ [1][ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ][1]ಕ್ಕೆ ಪಾವತಿಸಬೇಕಾದ ಯಾವುದೇ ಮೊತ್ತ,-

(i) ಪೂರೈಸಿದ ವಿದ್ಯುಚ್ಛಕ್ತಿಯ ಬಳಕೆ; ಅಥವಾ

(ii) ಬೆಳಕು, ಶಾಖ, ತಂಪಾಗಿಸುವಿಕೆ ಅಥವಾ ಚಲನಶಕ್ತಿಗಾಗಿ ಯಾವುದೇ ವಿದ್ಯುತ್ ಮೀಟರ್, ವಿದ್ಯುತ್ ಯಂತ್ರೋಪಕರಣ, ನಿಯಂತ್ರಣ ಗೇರು, ಜೋಡಣೆಗಳು, ತಂತಿಗಳು, ಅಥವಾ ಉಪಕರಣಗಳನ್ನು ಬಾಡಿಗೆ, ತಪಾಸಣೆ, ಪರೀಕ್ಷೆ, ಅಳವಡಿಕೆ, ಜೋಡಣೆ, ದುರಸ್ತಿಗಳು, ನಿರ್ವಹಣೆ ಅಥವಾ ನಿವಾರಣೆಗಾಗಿ ಅಥವಾ ವಿದ್ಯುಚ್ಛಕ್ತಿಯನ್ನು ಬಳಸುವ ಅಥವಾ ಬಳಸಬಹುದಾದ ಯಾವುದೇ ಇತರ ಉದ್ದೇಶಕ್ಕಾಗಿ ಅಥವಾ ವಿದ್ಯುಚ್ಛಕ್ತಿಯಿಂದ ಚಾಲಿತವಾಗುವ ಕೈಗಾರಿಕಾ ಅಥವಾ ಯಂತ್ರೋಪಕರಣಗಳಿಗಾಗಿ ಇರುವ ಯಾವುದೇ ಸಂಭಾವನೆ, ಬಾಡಿಗೆ ಅಥವಾ ಇತರ ಚಾರ್ಜುಗಳು; ಅಥವಾ

(iii) ಮೇಲೆ ಹೇಳಿದಂತೆ ಸಾಲದ ಮೇಲೆ ಪಡೆದ ಆದರೆ ಹಿಂದಿರುಗಿಸದಿರುವ ಯಾವುದೇ ಅಂಥ ಸರಕುಗಳ ದರ.

**[1][ವಿವರಣೆ.-** ಕರ್ನಾಟಕ ವಿದ್ಯುಚ್ಛಕ್ತಿ ಸುಧಾರಣಾ ಅಧಿನಿಯಮ, 1999ರ 14ನೇ ಪ್ರಕರಣದ ಅನುಸಾರವಾಗಿ [1][ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ][1]ಕ್ಕೆ, ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಯ (ಇಲ್ಲಿ ಇನ್ನು

ಮುಂದೆ ಮಂಡಳಿ ಎಂದು ಉಲ್ಲೇಖಿಸಿದೆ) ಸ್ವತ್ತು, ಸ್ವತ್ತಿನಲ್ಲಿನ ಯಾವುದೇ ಹಿತಾಸಕ್ತಿ ಅಥವಾ ಯಾವುದೇ ಹಕ್ಕುಗಳು ಮತ್ತು ಹೊಣೆಗಾರಿಕೆಗಳ ಮೊದಲ ವರ್ಗಾವಣೆಯ ಪರಿಣಾಮಕಾರಿ ದಿನಾಂಕಕ್ಕೂ ಮೊದಲು ಅಧಿನಿಯಮದ ಅಡಿಯಲ್ಲಿ ಮಂಡಳಿಗೆ ಪಾವತಿಸಬೇಕಾಗಿದ್ದ ಯಾವುದೇ ಮೊತ್ತವನ್ನು ಈ ಅಧಿನಿಯಮದ ಉದ್ದೇಶಕ್ಕಾಗಿ [1][ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ][1]ಕ್ಕೆ ಪಾವತಿಸಬೇಕಾದ ಬಾಕಿಗಳೆಂದು ಭಾವಿಸತಕ್ಕದ್ದು.][1]

(3) "ಋಣಿ" ಎಂದರೆ ಯಾವುದೇ ಬಾಕಿಗಳನ್ನು ಪಾವತಿಸಬೇಕಾದ ವ್ಯಕ್ತಿ;

(4) "ನಿಯಮಿಸಿದ ಪ್ರಾಧಿಕಾರ" ಎಂದರೆ, ಅಧಿಸೂಚನೆಯಲ್ಲಿ ನಿರ್ದಿಷ್ಟಪಡಿಸಬಹುದಾದಂಥ ಪ್ರದೇಶದಲ್ಲಿ ಹಾಗೂ ಪ್ರದೇಶಕ್ಕಾಗಿ ಮತ್ತು ಈ ಅಧಿನಿಯಮದ ಅಡಿಯಲ್ಲಿ ನಿಯಮಿಸಲಾದ ಪ್ರಾಧಿಕಾರದ ಪ್ರಕಾರ್ಯಗಳನ್ನು ನಿರ್ವಹಿಸಲು ಅಧಿಸೂಚನೆ ಮೂಲಕ, ರಾಜ್ಯ ಸರ್ಕಾರವು ಪದದಿಂದ ಅಥವಾ ಅನ್ಯಥಾ ಪ್ರಾಧೀಕರಿಸಿದ ಯಾರೇ ವ್ಯಕ್ತಿ.

1. 2001ರ ಅಧಿನಿಯಮ 27ರ ಮೂಲಕ ದಿನಾಂಕ:10.01.2002ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಿದೆ.

**3. ಬಿಲ್ಲುಗಳಲ್ಲಿ ಪಾವತಿ ಮಾಡಬೇಕಾದ ದಿನಾಂಕ ಮತ್ತು ಪಾವತಿ ಮಾಡದಿರುವುದರ ತತ್ಪರಿಣಾಮಗಳನ್ನು ತಿಳಿಸುವುದು.-**(1) ಋಣಿಯ ಮೂಲಕ [1][ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ][1]ಕ್ಕೆ ಪಾವತಿ ಮಾಡಬೇಕಾದ ಬಾಕಿಗಳ ಪ್ರತಿಯೊಂದು ಬಿಲ್ಲು, ನಿಯಮಿಸಲಾದ ನಮೂನೆಯಲ್ಲಿ ಇರತಕ್ಕದ್ದು ಮತ್ತು ಅಂಥ ಬಾಕಿಗಳನ್ನು ಪಾವತಿಸಬೇಕಾದ ದಿನಾಂಕವನ್ನು ಸ್ಪಷ್ಟವಾಗಿ ನಮೂದಿಸತಕ್ಕದ್ದು.

(2) ಅಂಥ ದಿನಾಂಕದೊಳಗೆ ಬಾಕಿಗಳನ್ನು ಪಾವತಿಸದಿದ್ದಲ್ಲಿ ನಿಯಮಿಸಬಹುದಾದಂಥ ದಂಡವನ್ನು ಹೆಚ್ಚುವರಿಯಾಗಿ ಪಾವತಿಸಲು ಹೊಣೆಗಾರನಾಗತಕ್ಕದ್ದು, ಮತ್ತು ಈ ಅಧಿನಿಯಮದಲ್ಲಿ ಇನ್ನುಮುಂದೆ ಹೇಳಲಾದ ವಿಧಾನದಲ್ಲಿ ಅಂಥ ವಸೂಲಾತಿಯನ್ನು ಮಾಡುವಾಗ ಭರಿಸುವ ವೆಚ್ಚಗಳೊಂದಿಗೆ ಅಂಥ ಬಾಕಿಗಳು ಮತ್ತು ದಂಡವನ್ನು ವಸೂಲು ಮಾಡತಕ್ಕದ್ದು.

1. 2001ರ ಅಧಿನಿಯಮ 27ರ ಮೂಲಕ ದಿನಾಂಕ:10.01.2002ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಿದೆ.

**4. ಬಾಕಿಗಳನ್ನು ಮತ್ತು ಪಾವತಿಸದಿರುವುದಕ್ಕಾಗಿನ ದಂಡದ ತಗಾದೆ ನೋಟೀಸು.-** ಋಣಿಯು, ಬಿಲ್ಲಿನಲ್ಲಿ ನಿರ್ದಿಷ್ಟಪಡಿಸಿದ ದಿನಾಂಕದವರೆಗೆ ಬಾಕಿಗಳನ್ನು ಪಾವತಿಸದಿದ್ದರೆ, ನಿಯಮಿಸಲಾದ ಪ್ರಾಧಿಕಾರವು ಯಾವುದೇ ಸಮಯದಲ್ಲಿ ನಿಯಮಿಸಲಾದ ನಮೂನೆಯಲ್ಲಿ ಋಣಿಯ ಹೆಸರು, ವಿವಿಧ ಬಾಕಿಗಳು, ದಂಡ ಮತ್ತು ವಸೂಲಾತಿಯ ಖರ್ಚುಗಳೊಂದಿಗೆ ಆತನು ಪಾವತಿಸಬೇಕಾದ ಮೊಬಲಗಳನ್ನು ನಮೂದಿಸಿದ ತಗಾದೆ ನೋಟಿಸನ್ನು ಆತನಿಗೆ ಜಾರಿ ಮಾಡಬಹುದು ಅಥವಾ ಜಾರಿಮಾಡುವಂತೆ ಮಾಡಬಹುದು.

**ವಿವರಣೆ.-** ನೋಂದಾಯಿತ ಅಂಚೆಯ ಮೂಲಕ ನೋಟೀಸನ್ನು ಕಳುಹಿಸುವುದನ್ನು ಸಂಬಂಧಪಟ್ಟ ವ್ಯಕ್ತಿಗೆ ನೋಟೀಸನ್ನು ಸಮರ್ಪಕವಾಗಿ ಜಾರಿಮಾಡಲಾಗಿದೆಯೆಂದು ಭಾವಿಸತಕ್ಕದ್ದು.

**5. ಪಾವತಿಯ ಹೊಣೆಗಾರಿಕೆಯನ್ನು ಪ್ರಶ್ನಿಸುವುದಕ್ಕಾಗಿ ದಾವೆ.-** 4ನೇ ಪ್ರಕರಣದ ಅಡಿಯಲ್ಲಿ ಋಣಿ ಅಥವಾ ಆತನ ಅಧಿಕೃತ ಏಜೆಂಟನಿಗೆ ತಗಾದೆ ನೋಟೀಸನ್ನು ಜಾರಿಮಾಡಿದ ಮೇಲೆ, ಆತನು ಬಾಕಿಗಳು, ದಂಡ ಅಥವಾ ಖರ್ಚುಗಳು ಅಥವಾ ಅದರ ಯಾವುದೇ ಭಾಗವನ್ನು ಪಾವತಿಸುವ ಆತನ ಹೊಣೆಗಾರಿಕೆಯನ್ನು ಆತನು ನಿರಾಕರಿಸದಿದ್ದರೆ, ಆತನು ಅದನ್ನು ಪಾವತಿಸಲು ಹೊಣೆಗಾರನಲ್ಲವೆಂದು ಲಿಖಿತ ಆಕ್ಷೇಪಣೆಯಡಿ ತಗಾದೆ ನೋಟೀಸಿನಲ್ಲಿ ನಿರ್ಷಿಷ್ಟಪಡಿಸಿದ ಒಟ್ಟು ಮೊತ್ತವನ್ನು ನಿಯಮಿಸಲಾದ ಪ್ರಾಧಿಕಾರದಲ್ಲಿ ಠೇವಣಿ ಇರಿಸಿದ ತರುವಾಯ, ತಗಾದೆ ನೋಟಿಸನ್ನು ಜಾರಿಮಾಡಿದ ಆರು ತಿಂಗಳುಗಳೊಳಗಾಗಿ ದಾವೆಯನ್ನು ಹೂಡಬಹುದು. ಅಂಥ ದಾವೆಯ ಫಲಿತಾಂಶಕ್ಕೆ ಒಳಪಟ್ಟು, ತಗಾದೆ ನೋಟೀಸು, ಅದರಲ್ಲಿ ನಮೂದಿಸಿದ ವಿವಿಧ ಬಾಕಿಗಳು, ದಂಡ ಮತ್ತು ಖರ್ಚುಗಳ ನಿರ್ಣಾಯಕ ಪುರಾವೆಯಾಗಿರತಕ್ಕದ್ದು.

**6. ಪಾವತಿಸದಿದ್ದಲ್ಲಿ, ಬಾಕಿ ಮುಂತಾದವುಗಳ ವಸೂಲಾತಿ.-** (1)4ನೇ ಪ್ರಕರಣದ ಅಡಿಯಲ್ಲಿ ಜಾರಿಮಾಡಿದ ತಗಾದೆ ನೋಟೀಸಿನಲ್ಲಿ ನಮೂದಿಸಿದ ವಿವಿಧ ಬಾಕಿಗಳು, ದಂಡ ಮತ್ತು ಖರ್ಚುಗಳ ಒಟ್ಟು ಮೊತ್ತವನ್ನು, ಅಂಥ ಜಾರಿಮಾಡಿದ ದಿನಾಂಕದಿಂದ ಮೂರು ತಿಂಗಳುಗಳ ಅಥವಾ ನಿಯಮಿಸಿದ ಪ್ರಾಧಿಕಾರವು ಕಾಲಕಾಲಕ್ಕೆ ಅನುಮತಿಸಬಹುದಾದಂಥ ವಿಸ್ತರಿಸಿದ ಅವಧಿಯ ಒಳಗಾಗಿ ನಿಯಮಿಸಿದ ಪ್ರಾಧಿಕಾರದಲ್ಲಿ ಠೇವಣಿ

ಇರಿಸಲು ತಪ್ಪಿದಲ್ಲಿ; ಅಂಥ ಮೊತ್ತದ ಸಂಬಂಧದಲ್ಲಿ ಋಣಿಯನ್ನು ತಪ್ಪಿತಸ್ಥನೆಂದು ಭಾವಿಸತಕ್ಕದ್ದು ಹಾಗೂ ಅದನ್ನು ಯಾವುದೇ ಇತರ ಕಾನೂನು ಅಥವಾ ಲಿಖಿತ ಪತ್ರ ಅಥವಾ ಕರಾರು ಪತ್ರದ ವಿರುದ್ಧವಾಗಿ ಏನೇ ಒಳಗೊಂಡಿದ್ದರೂ, ಭೂಕಂದಾಯದ ಬಾಕಿಯಂತೆ ವಸೂಲು ಮಾಡತಕ್ಕದ್ದು.

(2) ಅಂಥ ವಸೂಲಾತಿಯ ಉದ್ದೇಶಕ್ಕಾಗಿ, ನಿಯಮಿಸಿದ ಪ್ರಾಧಿಕಾರಿಯು ಅಧಿಕಾರಿವ್ಯಾಪ್ತಿಯನ್ನು ಹೊಂದಿರುವ ಡೆಪ್ಯೂಟಿ ಕಮೀಷನರನಿಗೆ ತಗಾದೆ ಮೊಬಲಗು ಮತ್ತು ವಿವರಗಳು ಹಾಗೂ ತಪ್ಪಿತಸ್ಥನಾದ ಋಣಿಯ ಹೆಸರು ಮತ್ತು ವಿವರಗಳನ್ನು ನಮೂದಿಸಿರುವ ನಿಯಮಿಸಲಾದ ನಮೂನೆಯಲ್ಲಿ ಆತನು ಸಹಿ ಮಾಡಿರುವ ಪ್ರಮಾಣಪತ್ರವನ್ನು ಕಳುಹಿಸಬಹುದು ಹಾಗೂ ಡೆಪ್ಯುಟಿ ಕಮೀಷನರನು ಅಂಥ ಪ್ರಮಾಣಪತ್ರವನ್ನು ಸ್ವೀಕರಿಸಿದ ಮೇಲೆ ಭೂಕಂದಾಯದ ಬಾಕಿಯಂತೆ ತಗಾದೆಯ ಮೊಬಲಗನ್ನು ಋಣಿಯಿಂದ ವಸೂಲು ಮಾಡಲು ಕ್ರಮ ಕೈಗೊಳ್ಳತಕ್ಕದ್ದು.

**7. ನಿಯಮಗಳ ರಚನಾಧಿಕಾರ.-** (1) ರಾಜ್ಯ ಸರ್ಕಾರವು, ಅಧಿಸೂಚನೆಯ ಮೂಲಕ ಪೂರ್ವ ಪ್ರಕಟಣೆಯ ಷರತ್ತಿಗೊಳಪಟ್ಟು ಈ ಅಧಿನಿಯಮದ ಉದ್ದೇಶಗಳನ್ನು ಜಾರಿಗೊಳಿಸುವುದಕ್ಕಾಗಿ ನಿಯಮಗಳನ್ನು ರಚಿಸಬಹುದು.

(2) ಈ ಅಧಿನಿಯಮದ ಅಡಿಯಲ್ಲಿ ರಚಿಸಿದ ಪ್ರತಿಯೊಂದು ನಿಯಮವನ್ನು, ಅದನ್ನು ರಚಿಸಿದ ತರುವಾಯ, ಆದಷ್ಟು ಬೇಗನೆ, ರಾಜ್ಯ ವಿಧಾನಮಂಡಲದ ಪ್ರತಿಯೊಂದು ಸದನದ ಮುಂದೆ, ಒಂದು ಅಧಿವೇಶನದಲ್ಲಿ ಅಥವಾ ಎರಡು ಅಥವಾ ಹೆಚ್ಚು ನಿರಂತರ ಅಧಿವೇಶನಗಳಲ್ಲಿ ಅಡಕವಾಗಿರಬಹುದಾದ ಒಟ್ಟು ಮೂವತ್ತು ದಿನಗಳ ಅವಧಿಯವರೆಗೆ ಅದು ಅಧಿವೇಶನದಲ್ಲಿರುವಾಗ ಮಂಡಿಸತಕ್ಕದ್ದು ಮತ್ತು ಮೇಲೆ ಹೇಳಿದ ಅಧಿವೇಶನ ಅಥವಾ ನಿರಂತರ ಅಧಿವೇಶನಗಳ ನಿಕಟ ತರುವಾಯದ ಅಧಿವೇಶನವು ಮುಕ್ತಾಯವಾಗುವುದಕ್ಕೆ ಮೊದಲು ಉಭಯ ಸದನಗಳು ನಿಯಮದಲ್ಲಿ ಯಾವುದೇ ಮಾರ್ಪಾಡು ಮಾಡಲು ಒಪ್ಪಿದರೆ ಅಥವಾ ಆ ನಿಯಮವನ್ನು ರಚಿಸತಕ್ಕದ್ದಲ್ಲವೆಂದು ಉಭಯ ಸದನಗಳು ಒಪ್ಪಿದರೆ ತದನಂತರ ಅಂಥ ನಿಯಮವು ಹಾಗೆ ಮಾರ್ಪಾಟಾದ ರೀತಿಯಲ್ಲಿ ಪರಿಣಾಮಕಾರಿಯಾಗತಕ್ಕದ್ದು ಅಥವಾ ಸಂದರ್ಭಾನುಸಾರವಾಗಿ ಪರಿಣಾಮಕಾರಿಯಾಗತಕ್ಕದ್ದಲ್ಲ. ಆದಾಗ್ಯೂ, ಯಾವುದೇ ಅಂಥ ಮಾರ್ಪಾಡು ಅಥವಾ ರದ್ದತಿಯು ಆ ನಿಯಮದ ಅಡಿಯಲ್ಲಿ ಈ ಮೊದಲು ಮಾಡಲಾದ ಯಾವುದೇ ಕಾರ್ಯದ ಮಾನ್ಯತೆಗೆ ಬಾಧಕವನ್ನು ಉಂಟುಮಾಡತಕ್ಕದ್ದಲ್ಲ.

******

The above translation of the Karnataka Power Transmission Corporation (Recovery of Dues) Act, 1976 (Karnataka Act 51 of 1976) shall be authoritative text in the Kannada language under section 5A of the Karnataka Official Language Act, 1963 (Karnataka Act 26 of 1963).

**THAAWARCHAND GEHLOT**
**GOVERNOR OF KARNATAKA**

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

**ಜಿ.ಶ್ರೀಧರ್**
ಸರ್ಕಾರದ ಕಾರ್ಯದರ್ಶಿ,
ಸಂಸದೀಯ ವ್ಯವಹಾರಗಳು ಮತ್ತು
ಶಾಸನ ರಚನೆ ಇಲಾಖೆ